ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೨ನೇ ಜುಲೈ ೧೯೯೦, ಆಷಾಢ ೧೧, ೧೯೧೨ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಘಂಟೆ ೧೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.]

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎ. ಎಸ್. ಪಾಟೀಲ್‌ರವರು ದಿನಾಂಕ ೭ನೇ ಜೂನ್ ೧೯೯೦ರಂದು ನಿಧನರಾದರೆಂದು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಮಾನ್ಯರು, ಮೊದಲನೇ, ಎರಡನೇ ಮತ್ತು ಮೂರನೇ ವಿಧಾನ ಸಭೆಗೆ ನವಲಗುಂದ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಸಹಕಾರಿ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ವಿಧಾನ ಸಭೆಯ ಅಂದಾಜು ಸಮಿತಿಯ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಿರುತ್ತಾರೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

(ಸಭೆಯು, ಮೃತರ ಗೌರವಾರ್ಥ ಒಂದು ನಿಮಿಷ ಕಾಲ ಎದ್ದುನಿಂತು ಮೌನವನ್ನಾಚರಿಸಿತು.)

ಮೃತರ ಕುಟುಂಬದವರಿಗೆ, ಸಭೆಯ ಸಂತಾಪಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು. ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಹುಬ್ಬಳ್ಳಿ ನಗರದ ಮಧ್ಯೆ ಹರಿಯುವ ನಾಲೆ

೧೨೧೬. ಶ್ರೀ ಗೋಪಿನಾಥ ಆರ್ ಸಾಂಡ್ರೆ (ಹುಬ್ಬಳ್ಳಿ-ಗ್ರಾಮಾಂತರ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹುಬ್ಬಳ್ಳಿ ನಗರದ ಮಧ್ಯೆ ಹರಿಯುವ ನಾಲಾ ಪ್ರತಿ ವರ್ಷ ಮಳೆಗಾಲದಲ್ಲಿ ತುಂಬಿ ಹರಿಯುವುದರಿಂದ ಸಾವು ನೋವು ಸಂಭವಿಸಿ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರವು ಕೈಕೊಳ್ಳಲು ಉದ್ದೇಶಿಸಿರುವ ಪರಿಹಾರೋಪಾಯಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ನಗರದ ಮಧ್ಯೆ ಹರಿಯುವ ಈ ನಾಲಾದ ಎರಡು ಬದಿಗೆ ಇರುವ ಗೋಡೆಗಳನ್ನು ದುರಸ್ತಿ ಮಾಡಿಸಲು ರೂ. ೧.೫೦ ಲಕ್ಷ ಅಂದಾಜು ವೆಚ್ಚದಿಂದ ಕೈಗೊಳ್ಳಲಾಗಿದೆ. ಇದಲ್ಲದೆ ರೂ. ೧೦೭ ಲಕ್ಷ ಅಂದಾಜು ವೆಚ್ಚದಿಂದ ೪೦ ಕಿ.ಮೀ. ಉದ್ದದ ನಾಲಾಗೋಡೆಗಳನ್ನು ಕಟ್ಟುವ ಯೋಜನೆ ತಯಾರಿಸಿದ್ದು, ಹಂತ ಹಂತವಾಗಿ ಇದನ್ನು ಕೈಗೊಳ್ಳಲಾಗುವುದು. ಈ ಯೋಜನೆಗಳಿಂದ ಮಳೆಗಾಲದಲ್ಲಿ ತುಂಬಿ ಹರಿಯುವ ನಾಲಾದಿಂದ ಆಗುವ ಹಾನಿ ತಪ್ಪುತ್ತದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಮಾನ್ಯ ಅಧ್ಯಕ್ಷರೇ, ೧.೫೦ ಲಕ್ಷ ರೂಪಾಯಿ ವೆಚ್ಚದಿಂದ ಗೋಡೆಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇನ್ನೂ ಪ್ರಾರಂಭವಾಗಿಲ್ಲ. ಬಹುಶಃ ಇದನ್ನು ಪ್ರಾರಂಭ ಮಾಡುತ್ತೀರಿ ಎಂಬ ಭರವಸೆ ನನಗೆ ಉಂಟು. ಅದರಂತೆ ಮಾಡುತ್ತೀರಾ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಆದಷ್ಟು ಬೇಗನೆ ಈ ಕಾರ್ಯಪನ್ನು ಕಾರ್ಯಗತ ಮಾಡಲಾಗುವುದು.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಮಳೆಯಿಂದ ತೀವ್ರವಾಗಿ ಹಾನಿಗೆ ಒಳಗಾಗಿರುವಂತಹ ಕೆಲವು ಪ್ರದೇಶಗಳು ಇವೆ. ನೀವು ಮಂಜೂರು ಮಾಡಿರುವಂತಹ ೧.೫೦ ಲಕ್ಷ ರೂಪಾಯಿಗಳ ಹಣ ಸಾಲದು. ತೀವ್ರವಾಗಿ ಹಾನಿಗೊಳಗಾದಂಥ ಪ್ರದೇಶಗಳಿಗೆ ಎಷ್ಟೇ ಹಣ ಖರ್ಚು ಬಿದ್ದರೂ ಅದನ್ನು ಮಂಜೂರು ಮಾಡುವುದಕ್ಕೆ ನೀವು ಒಪ್ಪುತ್ತೀರಾ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ೨೫-೫-೧೯೭೦ ರಂದು ಧಾರವಾಡದಲ್ಲಿ ಭಾರೀ ಮಳೆಯಿಂದ ತಗ್ಗು ಪ್ರದೇಶಗಳಾದ ಹಾವೇರಿಪೇಟೆ, ಕಾಂತಿಗಲ್ಲಿ, ಜಾವೂಸ್ ಪೇಟೆ, ಮದಾರ್‌ಸಾಬ್ ಪೇಟೆ, ಬಾಲಾಜಿ ಮಠ ಮುಂತಾದ ಕೆಲವು ಪ್ರದೇಶ ಗಳಲ್ಲಿ ಬಹಳಷ್ಟು ತೊಂದರೆಯಾಗಿದ್ದು ೧೪೮ ಕುಟುಂಬಗಳು ತೊಂದರೆಗೊಳಗಾಗಿವೆ ಎಂದು ಸಮೀಕ್ಷೆಯಲ್ಲಿ ಗುರುತಿಸಲಾಗಿದೆ. ಈಗಾಗಲೇ ಸಂತ್ರಸ್ತರ ಕುಟುಂಬಗಳಿಗೆ ೪೯,೦೭೦ ರೂಪಾಯಿಗಳ ಪರಿಹಾರ ಕೊಡಲಾಗಿದೆ. ಮಳೆ ಬಿದ್ದ ಕೆಲವು ತಗ್ಗು ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ಕೆಲವು ಸೌಕರ್ಯಗಳನ್ನು ಕೊಡುವುದಕ್ಕೆ ನಮ್ಮ ನಗರಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ನಾನು ಹಾಕಿದ್ದ ಪ್ರಶ್ನೆ ಹುಬ್ಬಳ್ಳಿ ನಗರದ ಕರ್ಕಿ ಹಳಕ್ಕೆ ಸಂಬಂಧಪಟ್ಟಿದ್ದು. ಇದರ ಬಗ್ಗೆ ಇನ್ನೂ ಏನು ಆಗಲಿಲ್ಲ. ತೀವ್ರವಾಗಿ ಹಾನಿಗೆ ಒಳಗಾದ ಈ ಪ್ರದೇಶ ಗಳಲ್ಲಿ ಗೋಡೆ ಕಟ್ಟುವುದಕ್ಕೆ irrespective of sanction of money, are you going to give money for that ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಂಬಂಧಪಟ್ಟ ಇಲಾಖೆಗೆ ಕೂಡಲೇ ಆದೇಶಕೊಡ ಲಾಗುವುದು.

ಸಂಜಯಗಾಂಧಿ ನಗರದ ಕೊಳಚೆ ಪ್ರದೇಶಕ್ಕೆ ಸಂಬಂಧಿಸಿದ ಜವೀನಿನ ಒತ್ತುವರಿ.

೧೩೩೧. ಶ್ರೀ ಶಿವಣ್ಣಮೇಗೌಡ (ನಾಗಮಂಗಲ).—ಮಾನ್ಯ ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಸೇರಿದ ಪೀಣ್ಯ ಹಿನೇ ಹಂತದಲ್ಲಿನ ಸಂಜಯಗಾಂಧಿನಗರ ಕೊಳಚೆ ಪ್ರದೇಶದಲ್ಲಿ (ಲಕ್ಷ್ಮೀದೇವಿನಗರ) ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಇನ್‌ಸ್ಟ್ರುಮೆಂಟ್ ಕಾರ್ಖಾನೆಯ ಮಾಲೀಕರ ಮನೆಯವರು ಒತ್ತುವರಿ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿಯವರು ಕಟ್ಟಡದ ನಕ್ಷೆಗೆ ಒಪ್ಪಿಗೆಯನ್ನು ಪಡೆಯದೇ ಕಟ್ಟಡವನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರ ಬಗ್ಗೆ ಕೈಗೊಳ್ಳುವ ಮುಂದಿನ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.